ಕಛೇರಿ ಕೊಠಡಿಗಳಿಂದ ಕೂಡಿರುತ್ತದೆ. ಆದ್ದರಿಂದ ಈ ಸಂಕೀರ್ಣದಲ್ಲಿ ಸುಮಾರು 18 ಜನ ಪ್ರವಾಸಿಗರಿಗೆ ವಸತಿ ಸೌಲಭ್ಯ ಒದಗಿಸಬಹುದಾಗಿರುತ್ತದೆ.

ಇ) ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಡಲಾಗಿದೆ. ಕಟ್ಟಡದ ಗುಣಮಟ್ಟದ ಬಗ್ಗೆ ಭೂ ಸೇನಾ ನಿಗಮದೊಡನೆ ಸೂಕ್ತ ಕ್ರಮ ಕೈಗೊಂಡು ಗುಣಮಟ್ಟ ಕಾಯ್ದುಕೊಳ್ಳಲಾಗುತ್ತದೆ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

(3) ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಕಾರ್ಯದರ್ಶಿ: ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997.

2) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 1997.

(4) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನಲ್ಲಿ ನಡೆದಿರತಕ್ಕ ಸ್ಥಾಯಿ ಸಮಿತಿ ಚುನಾವಣೆ ಕುರಿತು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ, ಗುಲ್ಬರ್ಗಾ ಜಿಲ್ಲಾ ಪಂಚಾಯಿತಿನಲ್ಲಿ 23-8-97ರಂದು ಒಂದು ಸ್ಪೆಷಲ್ ಜನರಲ್ ಬಾಡಿ ಮೀಟಿಂಗ್ ಕರೆದಿದ್ದರು. ಅದರಲ್ಲಿ ನಮ್ಮ ಕಾನ್ಸ್ಟಿಟ್ಯೂಷನ್ ಪ್ರಕಾರ ಪಂಚಾಯತಿಯ ಸ್ಟಾಂಡಿಂಗ್ ಕಮಿಟಿಯನ್ನು ಮಾಡಬೇಕು ಎನ್ನುವುದು ಇದೆ. ಆ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡುವಾಗ ಒಂದು ಮೀಟಿಂಗ್‌ಅನ್ನು ಕರೆದಿದ್ದರು. ಆ ಮೀಟಿಂಗ್‌ನಲ್ಲಿ ಬಹುಶಃ ನಮ್ಮ ಜಿಲ್ಲಾ ಮಂತ್ರಿಗಳು ಹಾಗೂ ಪವರ್ ಮಂತ್ರಿಗಳು ಹಾಜರಿದ್ದರು. ಅದಲ್ಲದೆ ಪಾರ್ಲಿಮೆಂಟಿನ ಸದಸ್ಯರೂ ಸಹ ಇದ್ದರು. ಇವರೆಲ್ಲರೂ ಸಹಿತ ಆದಿವಸದ ಮೀಟಿಂಗ್‌ಗೆ ಹೋಗಿ ಅದರಲ್ಲಿ ಕೆಲವು ಜನ ಸದಸ್ಯರಲ್ಲದೆ ಇರುವವರೂ ಕೂಡ ಹಾಜರಾತಿಯನ್ನು ಮಾಡಿಕೊಂಡಿದ್ದರು. ಮತ್ತು ಕೆಲವು ಸದಸ್ಯರನ್ನು ಹೆದರಿಸಿ, ಅಲ್ಲಿ ಒಬ್ಬರಿಗೊಬ್ಬರು ಎಳೆದಾಡತಕ್ಕ ಪ್ರಸಂಗ ಕೂಡ